# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 315(459+461)

ಸದಸ್ಯರ ಹೆಸರು : ಶ್ರೀ ಹೆಚ್.ಎಸ್. ಗೋಪಿನಾಥ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಮತ್ತು ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ)

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

ಉತ್ತರಿಸುವ ದಿನಾಂಕ : 16.02.2023

| ಕ್ರಮ ಸಂಖ್ಯೆ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಕರ್ನಾಟಕ ಲೋಕಾಯುಕ್ತ ಯಾವ ದಿನಾಂಕದಿಂದ ಜಾರಿಗೆ ಬಂದಿದೆ; | ರಾಜ್ಯದಲ್ಲಿ ಕರ್ನಾಟಕ ಲೋಕಾಯುಕ್ತ ಇಲಾಖೆ 16/01/1985ರಂದು ಜಾರಿಗೆ ಬಂದಿರುತ್ತದೆ |
| (ಆ) | ಲೋಕಾಯುಕ್ತ ಇಲಾಖೆಯ ಮೂಲ ಉದ್ದೇಶವೇನು; | ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984 ಉದ್ದೇಶಗಳ ಮತ್ತು ಕಾರಣಗಳ ಹೇಳಿಕೆ:1985ರ ಅಧಿನಿಯಮ ಸಂಖ್ಯೆ 4ರ ಉದ್ಧೃತಭಾಗವು ಕೆಳಕಂಡಂತಿರುತ್ತದೆ.<br>"ಆಡಳಿತ ನಿರ್ವಹಣೆಯಲ್ಲಿ ನಡೆದ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಮತ್ತು ಅಶಿಸ್ತಿನ ಪ್ರಕರಣಗಳೂ ಸೇರಿದಂತೆ, ಆಡಳಿತ ಕ್ರಮಗಳ ಸಂಬಂಧದಲ್ಲಿ ಬಂದ ಫಿರ್ಯಾದುಗಳ ಬಗ್ಗೆ ವಿಚಾರಣೆ ನಡೆಸುವ ಮೂಲಕ, ಸಾರ್ವಜನಿಕ ಆಡಳಿತ ಗುಣಮಟ್ಟಗಳನ್ನು ಸುಧಾರಿಸುವ ಉದ್ದೇಶಕ್ಕಾಗಿ ಲೋಕಾಯುಕ್ತವೆಂಬ ಸಂಸ್ಥೆಯನ್ನು ರಚಿಸುವಂತೆ ಆಡಳಿತ ಸುಧಾರಣಾ ಸಮಿತಿಯು ಶಿಫಾರಸ್ಸು ಮಾಡಿದೆ.<br>ಲೋಕಾಯುಕ್ತ ಎಂಬ ಸಂಸ್ಥೆಯನ್ನು ರಚಿಸುವುದು ಜನತಾ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿದ್ದ ಚುನಾವಣಾ ಘೋಷಣೆಗಳಲ್ಲಿ ಒಂದು.<br>ಈ ವಿಧೇಯಕವು, ಸಾರ್ವಜನಿಕ ನೌಕರರ ನಡತೆಗೆ ಸಂಬಂಧಿಸಿದ ಆಪಾದನೆಗಳನ್ನು ಅಥವಾ ದೂರುಗಳನ್ನು ಪರೀಶಿಲಿಸಲು ಮತ್ತು ವರದಿ ಮಾಡಲು ಒಬ್ಬ ಲೋಕಾಯುಕ್ತ ಮತ್ತು ಒಬ್ಬರು ಅಥವಾ ಹೆಚ್ಚು ಉಪಲೋಕಾಯುಕ್ತರ ನೇಮಕ ಮಾಡಲು ಉಪಬಂಧ ಕಲ್ಪಿಸುತ್ತದೆ. |

...2)

| | | | |
|---|---|---|---|
| | | | ಆ ಅಧಿನಿಯಮದ ವ್ಯಾಪ್ತಿಗೆ ಒಳಪಡುವ ಸಾರ್ವಜನಿಕ ನೌಕರರು,-<br>(1) ಮುಖ್ಯ ಮಂತ್ರಿಗಳು;<br>(2) ಎಲ್ಲ ಇತರ ಮಂತ್ರಿಗಳು;<br>(3) ರಾಜ್ಯ ಸರ್ಕಾರದ ಎಲ್ಲಾ ಅಧಿಕಾರಿಗಳು;<br>(4) ಸಹಕಾರಿ ಸಂಘಗಳೂ ಸೇರಿದಂತೆ, ರಾಜ್ಯ ವಿಧಾನಮಂಡಲದ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ರಚಿತವಾದ ಸ್ಥಳೀಯ ಪ್ರಾಧಿಕಾರಗಳು, ಶಾಸನಬದ್ಧ ನಿಕಾಯಗಳು ಅಥವಾ ನಿಗಮಗಳ ಅಧ್ಯಕ್ಷರು, ಉಪಾಧ್ಯಕ್ಷರು;<br>(5) ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ, ಸ್ಥಳೀಯ ಪ್ರಾಧಿಕಾರಗಳು, ನಿಗಮಗಳಲ್ಲಿ ರಾಜ್ಯ ಸರ್ಕಾರವು ಶೇಕಡಾ ಐವತ್ತೊಂದಕ್ಕೆ ಕಡಿಮೆಯಲ್ಲದ ಷೇರುಗಳನ್ನು ಹೊಂದಿರುವ ಕಂಪೆನಿಯಲ್ಲಿ, ಸಂಘಗಳ ನೋಂದಣಿ ಅಧಿನಿಯಮದ ಮೇರೆಗೆ ನೋಂದಾಯಿತವಾದ ಸಂಘಗಳಲ್ಲಿ, ರಾಜ್ಯ ವಿಧಾನಮಂಡಲದ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ಸಹಕಾರಿ ಸಂಘಗಳಲ್ಲಿ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳು.<br>ಫಿರ್ಯಾದಿನ ಸಂಬಂಧದಲ್ಲಿ ತನಿಖೆ ನಡೆಸಿದ ತರುವಾಯ ಸರ್ಕಾರಿ ನೌಕರನ ವಿರುದ್ಧದ ಆಪಾದನೆಯು ರುಜುವಾತಾಗಿದೆಯೆಂದು ಲೋಕಾಯುಕ್ತರು ಪರಿಗಣಿಸಿದರೆ ಅವನು ಧಾರಣ ಮಾಡಿದ ಹುದ್ದೆಯಲ್ಲಿ ಮುಂದುವರಿಯತಕ್ಕದ್ದಲ್ಲವೆಂದು ಘೋಷಣೆ ಮಾಡಬೇಕು ಮತ್ತು ಘೋಷಣೆಯನ್ನು ಸಕ್ಷಮ ಪ್ರಾಧಿಕಾರಿಯು ಅಂಗೀಕರಿಸಿದರೆ, ಸಂಬಂಧಪಟ್ಟ ಸರ್ಕಾರಿ ನೌಕರನು, ಮುಖ್ಯಮಂತ್ರಿ ಅಥವಾ ಇತರ ಯಾವೊಬ್ಬ ಮಂತ್ರಿ ಅಥವಾ ರಾಜ್ಯ ವಿಧಾನಮಂಡಲದ ಸದಸ್ಯನಾಗಿದ್ದರೆ, ಘೋಷಣೆಯನ್ನು ಅಂಗೀಕರಿಸಿದ ದಿನಾಂಕದಿಂದ |

...3)

| | | |
|---|---|---|
| | | ತನ್ನ ಹುದ್ದೆಗೆ ರಾಜಿನಾಮೆ ಕೊಡತಕ್ಕದ್ದು ಮತ್ತು ಅವನು ಇತರ ಸರ್ಕಾರೇತರ ನೌಕರನಾಗಿದ್ದರೆ, ಅವನನ್ನು ನಿಲಂಬನೆಯಲ್ಲಿರಿಸಲಾಗಿದೆ ಎಂದು ಭಾವಿಸತಕ್ಕದ್ದು.<br>ತನಿಖೆ ನಡೆಸಿದ ತರುವಾಯ ಸರ್ಕಾರಿ ನೌಕರನು ಯಾವುದೇ ದಂಡನೀಯ ಅಪರಾಧ ಮಾಡಿದ್ದಾನೆಂದು ಲೋಕಾಯುಕ್ತರಿಗೆ ಮನದಟ್ಟಾದರೆ, ಇತರ ಯಾವುದೇ ಪ್ರಾಧಿಕಾರಕ್ಕೆ ಈ ಬಗ್ಗೆ ಉಲ್ಲೇಖಿಸದೇ ಅಭಿಯೋಜನೆಯನ್ನು ಪ್ರಾರಂಭಿಸಬಹುದು, ಇಂಥ ಅಭಿಯೋಜನೆಯ ಸಂಬಂಧದಲ್ಲಿ, ಯಾವುದೇ ಕಾನೂನಿನ ಮೇರೆಗೆ ಅಗತ್ಯವಾದ ಯಾವುದೇ ಪೂರ್ವ ಮಂಜೂರಾತಿಯನ್ನು ನೀಡಲಾಗಿದೆ ಎಂದು ಭಾವಿಸತಕ್ಕದ್ದು.<br>ಜಾಗೃತ ಆಯೋಗವನ್ನು ರದ್ದುಪಡಿಸಲಾಗಿದೆ. ಆದರೆ, ಜಾಗೃತ ಆಯೋಗದ ಮುಂದೆ ಇತ್ಯರ್ಥವಾಗದೇ ಉಳಿದಿರುವ ಎಲ್ಲ ತನಿಖೆ ಮತ್ತು ವಿಚಾರಣೆಗಳನ್ನು ಮತ್ತು ಇತರ ಶಿಸ್ತಿನ ವ್ಯವಹರಣೆಗಳನ್ನು ಲೋಕಾಯುಕ್ತರಿಗೆ ವಹಿಸಲಾಗಿದೆ." |
| (ಇ) | ಲೋಕಾಯುಕ್ತ ಇಲಾಖೆಯಲ್ಲಿ ಪ್ರಸ್ತುತ ಎಷ್ಟು ಅಧಿಕಾರಿ/ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ; | ಪ್ರಸ್ತುತ ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ 1090 ಅಧಿಕಾರಿ/ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ವಿವರ ಕೆಳಕಂಡಂತಿರುತ್ತದೆ.<br>• ಗ್ರೂಪ್-ಎ ವೃಂದದಲ್ಲಿ 132<br>• ಗ್ರೂಪ್-ಬಿ ವೃಂದದಲ್ಲಿ 110<br>• ಗ್ರೂಪ್-ಸಿ ವೃಂದದಲ್ಲಿ 732<br>• ಗ್ರೂಪ್-ಡಿ ವೃಂದದಲ್ಲಿ 116 |
| (ಈ) | ಇದುವರೆಗೂ ಎಷ್ಟು ಭ್ರಷ್ಟಾಚಾರದ ಪ್ರಕರಣಗಳ ಬೆಳಕಿಗೆ ಬಂದಿವೆ. ಎಷ್ಟು ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗಿದೆ; ತಪ್ಪಿತಸ್ಥರನ್ನು ಶಿಕ್ಷೆಗೆ ಒಳಪಡಿಸಲಾಗಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಇಲ್ಲಿಯವರೆಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿ ಭ್ರಷ್ಟಾಚಾರಕ್ಕೆ ವಿಷಯಕ್ಕೆ ಸಂಬಂಧಿಸಿದಂತೆ 11046 ದೂರುಗಳು ದಾಖಲಾಗಿರುತ್ತವೆ. (ವಿವರಗಳನ್ನು ಅನುಬಂಧ-ಎ ರಂತೆ ಲಗತ್ತಿಸಿದೆ.) ಅವುಗಳಲ್ಲಿ 10161 ಪ್ರಕರಣಗಳನ್ನು |

...4

| | | | |
|---|---|---|---|
| | | | ಇತ್ಯರ್ಥಪಡಿಸಲಾಗಿದೆ. (ವಿವರಗಳನ್ನು ಅನುಬಂಧ-ಬಿ ರಂತೆ ಲಗತ್ತಿಸಿದೆ.) ಈ ಪ್ರಕರಣಗಳ ಪೈಕಿ 1281ರಲ್ಲಿ ಮುಂದಿನ ಕ್ರಮಕ್ಕೆ ಶಿಫಾರಸ್ಸು ಮಾಡಲಾಗಿದೆ. (ವಿವರಗಳನ್ನು ಅನುಬಂಧ-ಸಿ ರಂತೆ ಲಗತ್ತಿಸಿದೆ.)<br>ಇಲ್ಲಿಯವರೆಗೆ ಈ ಸಂಸ್ಥೆಯಲ್ಲಿ ಭ್ರಷ್ಟಾಚಾರ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ) ನಿಯಮಗಳು 1957ರ ನಿಯಮ 14-ಎ ರನ್ವಯ ಒಟ್ಟು 1094 ಇಲಾಖಾ ವಿಚಾರಣೆಗಳನ್ನು ನಡೆಸಲು ಸರ್ಕಾರದಿಂದ ವಹಿಸಲಾದ ಪ್ರಕರಣಗಳು ದಾಖಲಾಗಿರುತ್ತವೆ. (ವಿವರಗಳನ್ನು ಅನುಬಂಧ-ಡಿ ರಂತೆ ಲಗತ್ತಿಸಿದೆ.) ಅವುಗಳಲ್ಲಿ 656 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿರುತ್ತದೆ.(ವಿವರಗಳನ್ನು ಅನುಬಂಧ-ಇ ರಂತೆ ಲಗತ್ತಿಸಿದೆ.) ಇತ್ಯರ್ಥಪಡಿಸಲಾದ ಪ್ರಕರಣಗಳ ಪೈಕಿ 352 ಪ್ರಕರಣಗಳಲ್ಲಿ ಅಂತಿಮ ಆದೇಶ ಸ್ವೀಕೃತವಾಗಿರುತ್ತದೆ. (ವಿವರಗಳನ್ನು ಅನುಬಂಧ-ಎಫ್ ರಂತೆ ಲಗತ್ತಿಸಿದೆ.)<br>ಈ ಸಂಸ್ಥೆಯಲ್ಲಿ ಇಲ್ಲಿಯವರೆಗೆ ಭ್ರಷ್ಟಾಚಾರ ನಿರ್ಮೂಲನ ಕಾಯ್ದೆಯಡಿ 7898 ಭ್ರಷ್ಟಾಚಾರ ಪ್ರಕರಣಗಳು ದಾಖಲಾಗಿದ್ದು, (ವಿವರವನ್ನು ಅನುಬಂಧ-1ರಲ್ಲಿ ಲಗತ್ತಿಸಿರುತ್ತದೆ) 7779 ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗಿರುತ್ತದೆ. (ವಿವರವನ್ನು ಅನುಬಂಧ-2ರಲ್ಲಿ ಲಗತ್ತಿಸಿರುತ್ತದೆ). ಈ ಪ್ರಕರಣಗಳಲ್ಲಿ 996 ಪ್ರಕರಣಗಳಲ್ಲಿ ಶಿಕ್ಷೆಗೆ ಒಳಪಡಿಸಲಾಗಿರುತ್ತದೆ. (ವಿವರವನ್ನು ಅನುಬಂಧ-3 ರಲ್ಲಿ ಲಗತ್ತಿಸಿರುತ್ತದೆ) |

ಸಂಖ್ಯೆ: ಸಿಆಸುಇ **35** ಸೇಲೋಯು **2023**

**(ಬಸವರಾಜ ಬೊಮ್ಮಾಯಿ)**

ಮುಖ್ಯಮಂತ್ರಿ